# ಎಲ್ಲಿ ಬೆಣ್ಣೆಯ ಬಚ್ಚಿಡುವೆ ನಾ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 61
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 112.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 134.
4. **Note:** Lyrics given here are as per Ref. 1. The wordings in Ref. 2 and Ref. 3 are similar to Ref. 1 with few variations, which are not considered here.
5. **Note:** Singer has followed Ref. 2.

ರಾಗ: ಪಂತುವರಾಳಿ ತಾಳ: ಅಟ

ಎಲ್ಲಿ ಬೆಣ್ಣೆಯ ಬಚ್ಚಿಡುವೆ ನಾ – ಈ
ಕಳ್ಳ ಕೃಷ್ಣನ ಹಾವಳಿ ಘನವಾಯಿತು ॥ ಪ ॥

ನೆಲುವು ನಿಲುಕದೆಂದಿಡುವೆನೆ – ನೋಡೆ
ಬೆಳೆಯಬಲ್ಲನಿವ ಬ್ರಹ್ಮಾಂಡಕೆ
ತಿಳಿಸದೆ ಕತ್ತಲೊಳಿಡುವೆನೆ – ಅಕ್ಕ
ಬೆಳಕೆಲ್ಲವೀತನ ಕಂಗಳ ಥಾಳ ॥ ೧ ॥

ಎವೆಯಿಕ್ಕದಲ್ಲಿ ಕಾದಿಡುವೆನೆ – ನೋಡೆ
ದಿವಿಜರೆಲ್ಲ ಈತನ ಮಾಯೆ
ಅವರ ಬಳಿಗೆ ಮೊರೆಯಿಡುವೆನೆ – ಅಕ್ಕ
ಇವನಿಟ್ಟ ಬಂಟರಿಂದ್ರಾದಿಗಳೆಲ್ಲರು ॥ ೨ ॥

ಈಗಲೆ ಇಂತು ಮಾಡುವನು – ಮುಂದೆ
ಆಗಲೀಸನು ನಮ್ಮ ಒಗೆತನವಮ್ಮ
ಕೂಗಿ ಹೇಳಲು ಮತ್ತೆ ಕೇಡಮ್ಮ – ಮುಂದೆ

ಹೇಗೆ ಪುರಂದರ ವಿಠಲ ನಟ್ಟುಳಿಗೆ ?     ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಒಬ್ಬ ಗೋವಳಿತಿ ಕೃಷ್ಣನ ಕಾಟಕ್ಕೆ ಬೇಸತ್ತು, 'ಎಲ್ಲಿ ಬೆಣ್ಣೆಯ ಬಚ್ಚಿಡುವೆನು' ಎಂದು ಕಳವಳದ ಮಾತುಗಳನ್ನಾಡಿದ್ದಾಳೆ.

**ಘನವಾಯಿತು** – ದಟ್ಟವಾಯಿತು, ಹೆಚ್ಚಿತು.

**ಥಾಳ** – ಹೊಳಪು, ಪ್ರಕಾಶ ('ತಸ್ಯ ಭಾಸಾ ಸರ್ವಮಿದಂ ವಿಭಾತಿ')

**ಎವೆಯಿಕ್ಕದಲ್ಲಿ** = ಇವನ ಕಣ್ಣಿಗೆ ಕಾಣದಂತೆ
**ದಿವಿಜರೆಲ್ಲ** – ದೇವತೆಗಳೆಲ್ಲ.

**ನೆಲುವು** = ಹಾಲು ಮೊಸರಿನ ಪಾತ್ರೆಗಳನ್ನು ಇಡಲು ಇಳಿಬಿಡುವ ಹಗ್ಗದ ಜಾಳಿಗೆ

**ದಿವಿಜ** = ದೇವತೆ, ಬ್ರಾಹ್ಮಣ, ಭಕ್ತ

**ನಟ್ಟು** = ನಾಡು ಭಾಗ, ಒಳಸೇರಿ, ಆಳವಾಗಿ ಇಳಿದ ಹುಲ್ಲು ಬೇರು, ತಡೆ, ತೊಡಕು

**ಬೆಳೆಯಬಲ್ಲನಿವ ಬ್ರಹ್ಮಾಂಡಕೆ** = ವಾಮಾನವತಾರ

**ತಿಳಿಸದೆ ಕತ್ತಲೊರೆಳಿಡುವೆನೆ** = ನರಸಿಂಹಾವತಾರ

**ಅಟ್ಟುಳಿ** – ಒತ್ತಾಗಿ ಬರುವುದು, ತೊಂದರೆ ಪಡಿಸುವುದು, ಕಾಟ ಕೊಡುವುದು
**ಅವನೀಶ್ವರಗೆ** – ದೊರೆಗೆ.

**ಇನಿತು** – ಇಂತು, ಇಷ್ಟು.

**ಒಗೆತನ** = ಆಪ್ತವ್ಯ, ದಂಪತಿಗಳ ಅನ್ಯೋನ್ಯ ಜೀವನ ಮತ್ತು ಸಂಸಾರ ವ್ಯವಸ್ಥೆ, ಬೀಗತನ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, benne, kalla, brahmanda, vamanavatara, Narasimha, vamana, indra, gopi, deva, maya,
**Pravachana:** NA
**Explanation:** NA